ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

# KARNATAK UNIVERSITY, DHARWAD

*NAAC Accredited with "A" Grade 2022*

"UNIVERSITY WITH POTENTIAL FOR EXCELLENCE"

ಪರೀಕ್ಷಾ (ಘಟಿಕೋತ್ಸವ) ವಿಭಾಗ
ಪಾವಟೆ ನಗರ, ಧಾರವಾಡ – 580003
website : www.kud.ac.in E-mail : convocationkud@gmail.com

Examination (Convocation) Section,
Pavate Nagar, Dharwad-580003.
Ph.No.0836-2215256


ದಿನಾಂಕ: 13.4.2026

ನಂ.ಕೆ.ಯು.ಪರೀಕ್ಷಾ/ವಾರ್ಷಿಕ ಘಟಿಕೋತ್ಸವ/2026/45(ಎ)

## ತಿದ್ದುಪಡೆ ಅಧಿಸೂಚನೆ

ದಿನಾಂಕ 15.4.2026 ರಂದು ಜರುಗಬೇಕಾದ 2024ನೇ ಸಾಲಿನ 75ನೆಯ ವಾರ್ಷಿಕ ಘಟಿಕೋತ್ಸವವನ್ನು ದಿನಾಂಕ 23.4.2026 ರಂದು ಮುಂಜಾನೆ 11.00 ಗಂಟೆಗೆ ಗಾಂಧಿ ಭವನ, ಕರ್ನಾಟಕ ವಿಶ್ವವಿದ್ಯಾಲಯ ಆವರಣ, ಪಾವಟೆನಗರದಲ್ಲಿ ಜರುಗಿಸಲು ನಿರ್ಧರಿಸಲಾಗಿದೆ.

ಗೌರವಾನ್ವಿತ ಶ್ರೀ. ಥಾವರ್‌ಚಂದ್ ಗೆಹ್ಲೋಟ್, ರಾಜ್ಯಪಾಲರು ಹಾಗೂ ವಿಶ್ವವಿದ್ಯಾಲಯದ ಕುಲಾಧಿಪತಿಗಳು, ಮತ್ತು ಕರ್ನಾಟಕದ ರಾಜ್ಯಪಾಲರು, ಇವರು ಘಟಿಕೋತ್ಸವದ ಅಧ್ಯಕ್ಷತೆ ವಹಿಸಲಿದ್ದಾರೆ. ಗೌರವಾನ್ವಿತ ಡಾ. ಎಂ.ಸಿ. ಸುಧಾಕರ್ ವಿಶ್ವವಿದ್ಯಾಲಯದ ಸಮಕುಲಾಧಿಪತಿಗಳು ಮತ್ತು ಉನ್ನತ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ, ಇವರು ಉಪಸ್ಥಿತರಿರುವರು. ಶ್ರೀ. ಎ.ಎಸ್. ಕಿರಣ್‌ಕುಮಾರ್, ನಿಕಟಪೂರ್ವ ಅಧ್ಯಕ್ಷರು, ISRO ಇವರು, ಮುಖ್ಯ ಅತಿಥಿಯಾಗಿ ಘಟಿಕೋತ್ಸವ ಭಾಷಣ ಮಾಡುವರು.

ಎಲ್ಲ ಪದವಿಗಳ ಘಟಿಕೋತ್ಸವ ಪದವಿ ಪ್ರಮಾಣ ಪತ್ರ (Degree Certificate) ಪಡೆಯಲು ಉಪಸ್ಥಿತ (In person) ಎಂದು ಅರ್ಜಿ ಸಲ್ಲಿಸಿದಲ್ಲಿ ಅಂತಹ ವಿದ್ಯಾರ್ಥಿಗಳಿಗೆ ಮಾತ್ರ ಕರ್ನಾಟಕ ವಿಶ್ವವಿದ್ಯಾಲಯದ ಪರೀಕ್ಷಾ ವಿಭಾಗದ ಘಟಿಕೋತ್ಸವ ಶಾಖೆಯಲ್ಲಿ ದಿನಾಂಕ 22.4.2026 ರಂದು ಬೆಳಿಗ್ಗೆ 10.30 ರಿಂದ ಸಂಜೆ 6.00 ಗಂಟೆಯವರೆಗೆ ಹಾಗೂ ದಿನಾಂಕ 23.4.2026 ರಂದು ಬೆಳಿಗ್ಗೆ 8.00 ರಿಂದ 9.00 ಗಂಟೆಯ ಒಳಗೆ, ಪದವಿ ಪ್ರಮಾಣ ಪತ್ರಗಳನ್ನು ವಿತರಿಸಲಾಗುವುದು. ರ್‍ಯಾಂಕ್ ಪಡೆದ ವಿದ್ಯಾರ್ಥಿಗಳು ಉಪಸ್ಥಿತರಾಗಿ ಪದವಿ ಪ್ರಮಾಣ ಪತ್ರ ಪಡೆಯುವಾಗ ತಮ್ಮ ಮಹಾವಿದ್ಯಾಲಯ ಅಥವಾ ವಿಭಾಗದಿಂದ ಪಡೆದ ಗುರುತಿನ ಚೀಟಿಗಳನ್ನು ಸಾದರಪಡಿಸಬೇಕು.

ಎಲ್ಲ ಸ್ನಾತಕ/ಸ್ನಾತಕೋತ್ತರ ಪದವಿಯಲ್ಲಿ ರ್‍ಯಾಂಕ್ ಪಡೆದ ವಿದ್ಯಾರ್ಥಿಗಳು ಹಾಗೂ ಪಿಎಚ್.ಡಿ. ಪದವೀಧರರು ದಿನಾಂಕ 23.4.2026 ರಂದು ಘಟಿಕೋತ್ಸವದ ಸಮಾರಂಭಕ್ಕೆ ಖುದ್ದಾಗಿ ಹಾಜರಾಗುವುದು.

ಮುಂದುವರೆದು, ಉಪಸ್ಥಿತರಾಗಿ ಪದವಿ ಪ್ರಮಾಣ ಪತ್ರಗಳನ್ನು ಪಡೆಯಲಿಚ್ಛಿಸಿ ಘಟಿಕೋತ್ಸವ ಅರ್ಜಿಗಳನ್ನು ಸಲ್ಲಿಸಿರುವಂತಹ ಪಿಎಚ್.ಡಿ., ಸ್ನಾತಕ/ಸ್ನಾತಕೋತ್ತರ ರ್‍ಯಾಂಕ್ ಪಡೆದ ವಿದ್ಯಾರ್ಥಿಗಳು ಹಾಗೂ ಡಿಪ್ಲೋಮಾ, ಸ್ನಾತಕೋತ್ತರ ಡಿಪ್ಲೋಮಾ, ಪದವಿಗಳ ವಿದ್ಯಾರ್ಥಿಗಳು ಮಾತ್ರ ಘಟಿಕೋತ್ಸವ ಮೆರವಣಿಗೆಯಲ್ಲಿ ಪಾಲ್ಗೊಳ್ಳಲು ದಿನಾಂಕ 23.4.2026 ರಂದು ಬೆಳಿಗ್ಗೆ 9.30 ಗಂಟೆಗೆ ವಿದ್ಯಾರ್ಥಿಗಳು ಕಡ್ಡಾಯವಾಗಿ ಖಾದಿ ಬಿಳಿ ಉಡುಪುಗಳನ್ನು ಧರಿಸುವುದರೊಂದಿಗೆ ವಿಶ್ವವಿದ್ಯಾಲಯದಿಂದ ವಿತರಿಸಲಾಗುವ ಗೌನ್ ಧರಿಸಿ, ಆಡಳಿತ ಕಚೇರಿಯ ಮುಂದೆ ಉಪಸ್ಥಿತರಿರಬೇಕು. ಗೌನ್‌ಗಳನ್ನು ಪಡೆಯಬಯಸುವ ವಿದ್ಯಾರ್ಥಿಗಳು ದಿನಾಂಕ 22.4.2026 ರಂದು ಪರೀಕ್ಷಾ ವಿಭಾಗದ ವಿಚಾರಣಾ ಮಳಿಗೆಯಲ್ಲಿ ಕಚೇರಿಯ ವೇಳೆ 10.30 ರಿಂದ 06.00 ರವರೆಗೆ ಹಾಗೂ ದಿನಾಂಕ 23.4.2026 ರಂದು ಬೆಳಿಗ್ಗೆ 8.00 ರಿಂದ 9.00 ಗಂಟೆಯ ಒಳಗೆ ಗೌನ್‌ಗಳನ್ನು ಶುಲ್ಕ ರೂ.500/– ಗಳನ್ನು ಭರಿಸಿ, ರಶೀದಿಯನ್ನು ಪಡೆದು ಗೌನ್‌ಗಳನ್ನು ಪಡೆಯುವುದು. ಗೌನ್‌ನ್ನು ಧರಿಸದೇ ಇದ್ದವರಿಗೆ ಮೆರವಣಿಗೆ ಹಾಗೂ ಘಟಿಕೋತ್ಸವ ಸಮಾರಂಭದಲ್ಲಿ ಪಾಲ್ಗೊಳ್ಳಲು ಅವಕಾಶವಿರುವುದಿಲ್ಲ. ಹಾಗೂ ಘಟಿಕೋತ್ಸವ ಸಮಾರಂಭ ಪೂರ್ಣಗೊಂಡ ನಂತರ ಗೌನ್‌ಗಳನ್ನು ಮರಳಿ ಪರೀಕ್ಷಾ ವಿಭಾಗದಲ್ಲಿ ಒಪ್ಪಿಸಿ ರೂ.200/– ಗಳನ್ನು ಹಿಂಪಡೆಯಬಹುದು.

13/4/26

ಕುಲಸಚಿವರು (ಮೌಲ್ಯಮಾಪನ)

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

# KARNATAK UNIVERSITY, DHARWAD

*NAAC Accredited with "A" Grade 2022*

"UNIVERSITY WITH POTENTIAL FOR EXCELLENCE"

ಪರೀಕ್ಷಾ (ಘಟಿಕೋತ್ಸವ) ವಿಭಾಗ
ಪಾವಟೆ ನಗರ, ಧಾರವಾಡ – 580003
website : www.kud.ac.in E-mail : convocationkud@gmail.com

Examination (Convocation) Section,
Pavate Nagar, Dharwad-580003.
Ph.No.0836-2215256

**No.KUD/Exam/Convocation/2026/45/(A)** **Date: 13.4.2026**

## : AMENDMENT NOTIFICATION :

**The 75th of 2024 Annual Convocation which was scheduled to be held on 15.4.2026, has been decided to be held on 23.4.2026 at 11.00 A.M.**

**Hon`ble Shri. Thaawar Chand Gehlot, the Governor of Karnataka and the Chancellor of the University will preside over the Convocation & Dr. M. C. Sudhakar, Hon'ble Pro-Chancellor & Minister for Higher Education, Government of Karnataka will grace the occasion, Sri. A.S. Kiran Kumar, Former Chairman, ISRO will deliver the Convocation Address, as the Chief Guest.**

All **UG/PG** Degree Rank Holders candidates for taking the degree In person will be distributed Degree Certificates of the candidates at the **Convocation Branch, Examination Section, Vishwachetan Building, from 10.30 a.m. to 6.00 p.m. on 22.4.2026 and 8.00 a.m. to 9.00 a.m. on 23.4.2026.** The candidates have to produce their Identity Cards issued by the concerned Colleges/ Departments for obtaining the Degree Certificates.

**All the Rank holders of UG/PG & Ph.D. holders are requested to attend the Convocation Function on 23.4.2026.**

**Ph.D., all UG/PG Rank Holder candidates and Diploma/PG Diploma** Courses who have applied for obtaining their degree certificates **In person** and wish to participate in the Convocation procession are requested to wear the **White Khadi** dress compulsorily along with **Gown** which will be provided by the Karnatak University and be present in front of the **Administrative Building at 9.30 a.m. on 23.4.2026. For obtaining Gown candidates have to pay a sum of Rs.500/- on 22.4.2026 at the University Examination Section (Enquiry Counter), during office hours between 10.30 a.m. to 06.00 p.m. and on 23.4.2026 between 8.00 a.m. to 9.00 a.m. The Students who are not wearing the Gown will not be allowed to attend the procession & Convocation, and after the Convocation Function is over, you can return the gowns to Examination Section and get Rs.200/-.**

13/4/26

**REGISTRAR (EVALUATION)**